ಶ್ರೀ ಸಿ.ಎಂ.ಉದಾಸಿ:- ಮಾನ್ಯ ಸಭಾಧ್ಯಕ್ಷರೆ, ಈ ಬಗ್ಗೆ ಪಕ್ಷ ಬೇಧ ಮರೆತು ಆಕ್ಷೇಪವನ್ನು ವ್ಯಕ್ತಪಡಿಸಿದ ಸದಸ್ಯರುಗಳನ್ನೆಲ್ಲಾ ಕರೆದು ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಇದರ ಬಗ್ಗೆ ಇನ್ನು ಎರಡು ಮೂರು ದಿವಸಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ನೀರಾವರಿ ಸಚಿವರ ಜೊತೆಗೆ ಸಮಾಲೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳಲಾಗುವುದೆಂದು ತಿಳಿಸುತ್ತೇನೆ.

ವಿಷಯ:- 1995-96ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಯಕ್ಷಗಾನ ಕಲಾವಿದರನ್ನು ಕೈ ಬಿಟ್ಟಿರುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 167 (957)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕನ್ನಡ ರಾಜ್ಯೋತ್ಸವದಲ್ಲಿ ಕಳೆದ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡುವಲ್ಲಿ ಯಕ್ಷಗಾನ ಕಲಾವಿದರನ್ನು ಕೈಬಿಡಲಾಗಿದೆಯೇ? ಬಿಡಲಾಗಿದ್ದರೆ ಅದಕ್ಕೆ ಅರ್ಹ ಕಲಾವಿದರ ಅಭಾವ ಕಾರಣವೇ ಅಥವಾ ಸರ್ಕಾರದ ನೀತಿ ಕಾರಣವೇ?

ಆ) ರಾಜ್ಯೋತ್ಸವದ ಪ್ರಶಸ್ತಿಗೆ ಕಲಾವಿದರ ಆಯ್ಕೆಗೆ ಸರ್ಕಾರದ ಮಾನದಂಡವೇನು?

ಶೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ ಮತ್ತು ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು):-

ಅ) 1995-96ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಯಕ್ಷಗಾನ ಕಲಾವಿದರು ಆಯ್ಕೆಯಾಗಿರುವುದಿಲ್ಲ. ಸಲಹಾ ಸಮಿತಿಯ ಶಿಫಾರಸು ಮತ್ತು ಸರ್ಕಾರದ ತೀರ್ಮಾನದಂತೆ ಅರ್ಹ ಮಹನೀಯರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಆ) ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಲು ಸರ್ಕಾರವು ನೇಮಕ ಮಾಡುವ ಸಲಹಾ ಸಮಿತಿಯ ಶಿಫಾರಸು, ಆದರೆ ಆಯ್ಕೆಯ ಅಂತಿಮ ನಿರ್ಧಾರ ಸರ್ಕಾರದ್ದಾಗಿರುತ್ತದೆ.

+ಶ್ರೀ ಕುಂಬ್ಳೆ ಸುಂದರರಾವ್:- ಸನ್ಮಾನ್ಯ ಅಧ್ಯಕ್ಷರೆ, ಕನ್ನಡ ರಾಜ್ಯೋತ್ಸವದಲ್ಲಿ ಕಳೆದ ಬಾರಿಯ ಪ್ರಶಸ್ತಿಗೆ ಯಕ್ಷಗಾನ ಕಲಾವಿದರನ್ನು ಏಕೆ ಆಯ್ಕೆ ಮಾಡಿಲ್ಲವೆಂದು ಕೇಳಿದ್ದಕ್ಕೆ ಒಂದು ಕಡೆ ಆಗಿಲ್ಲವೆಂದೂ ಹೇಳುತ್ತಾರೆ, ಇನ್ನೊಂದು ಕಡೆ ಅರ್ಹ ಕಲಾವಿದರನ್ನು ಸರ್ಕಾರದ ತೀರ್ಮಾನದಂತೆ ಆಯ್ಕೆ ಮಾಡಲಾಗಿದೆಯೆಂತಲೂ ಹೇಳಿದ್ದಾರೆ.. ಇದರ ಅರ್ಥ ಏನೆಂಬುದು ನನಗೆ ಗೊತ್ತಾಗಲಿಲ್ಲ. 'ಯಕ್ಷಗಾನಕ್ಕೆ ಅರ್ಹತೆ ಇಲ್ಲವೆಂದು ಅರ್ಥವೇ ಅಥವಾ ಸಮಿತಿಗೆ ಯಕ್ಷಗಾನ ಕಲಾವಿದರನ್ನು ಆಯ್ಕೆ ಮಾಡಲು ಅರ್ಹತೆ ಇಲ್ಲ ಎಂದೇ? ಎರಡನೆಯ ಪ್ರಶ್ನೆಯಲ್ಲಿ ಕಲಾವಿದರನ್ನು ಆಯ್ಕೆ ಮಾಡುವ ಮಾನದಂಡ 'ಎನು

ಎಂದು ಕೇಳಿರುವುದಕ್ಕೆ 'ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಹ' ವ್ಯಕ್ತಿಗಳನ್ನು ಮಾಡಲು ಸರ್ಕಾರವು ನೇಮಕ ಮಾಡುವ ಸಲಹಾ ಸಮಿತಿಯ ಶಿಫಾರಸ್ಸು ಆದರೆ ಆಯ್ಕೆಯ ಅಂತಿಮ ನಿರ್ಧಾರ ಸರ್ಕಾರದ್ದಾಗಿರುತ್ತದೆ' ಎಂದು ಹೇಳಲಾಗಿದೆ. ಈ ಮಾನದಂಡ ಯಾವ ರೀತಿ ಇರುತ್ತದೆ? ಯಕ್ಷಗಾನ ಕ್ಷೇತ್ರ ಬಂಜೆತನವನ್ನು ಹೊಂದಿದ್ದರೆ ಸರಿ; ಅದು ನಾಶವಾಗಿದ್ದರೆ ಸರಿ ಅದರಲ್ಲಿ ಅರ್ಹರನ್ನು ಹುಡುಕಿದರೆ ಸಿಗುವುದಿಲ್ಲವೆಂದರೆ ಸರಿ ಆದರೆ ಪರಿಸ್ಥಿತಿ ಹಾಗೇನೂ ಇಲ್ಲ, ಯಕ್ಷಗಾನದಂಥ ಒಂದು ಸಮೃದ್ಧ ಕಲೆಗೆ, ಒಂದು ದೊಡ್ಡ ರಂಗಭೂಮಿಗೆ ಅನೇಕ ಕಲಾವಿದರ ಕೊಡುಗೆ ಈಗಲೂ ನೀಡುತ್ತಿರುವಾಗ ನೀವು ಈ ತರಹ ಕೈ ಬಿಡುತ್ತೀರಿ ಏಕೆ? ಇದು ನನಗೆ ಸಿಗಲಿಲ್ಲವೆಂದು ಅಲ್ಲ, ಅಥವಾ ಇನ್ನೊಬ್ಬರಿಗೆ ಸಿಗಲಿಲ್ಲವೆಂದು ಅಲ್ಲ ಇದರಲ್ಲಿ ಸ್ವಾರಸ್ಯ ಏನೆಂದರೆ' ಇತ್ತೀಚಿನ ದಿನಗಳಲ್ಲಿ ಯಕ್ಷಗಾನವನ್ನು ಏಕೋ ಸರ್ಕಾರ ಮೂಲೆಗುಂಪು ಮಾಡುವ ಅಥವಾ ಅವಘಡಿಸುವ ಕೆಲಸ ಮಾಡುತ್ತಿದೆ. ಇದು ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾದ ಕಲೆ ಎಂದು ಬಹಳ ಜನರಲ್ಲಿ ತಪ್ಪು ಅಭಿಪ್ರಾಯವಿದೆ. ಹಾಗೇನೂ ಇಲ್ಲ. ಮಲೆನಾಡಿನಲ್ಲಿ ಯಕ್ಷಗಾನ ಇದೆ, ಅದರೆ ಪ್ರಾದೇಶಿಕವಾಗಿ ವ್ಯತ್ಯಾಸವಿದೆ ಅಷ್ಟೇ. ಸುಮಾರು 32 ವೃತ್ತಿ ಮೇಳಗಳಿವೆ, ಯಕ್ಷಗಾನದಿಂದ ಸುಮಾರು ಒಂದು ಸಾವಿರ ಕಲಾವಿದರ ಕುಟುಂಬಗಳು ಜೀವನ ಮಾಡುತ್ತಿದ್ದಾರೆ. ಅಷ್ಟೇ ಜನ ಅವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ಸಾವಿರಾರು ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ಇಂಥಾ ಬಹುದೊಡ್ಡ ರಂಗಭೂಮಿಯನ್ನು ಇಷ್ಟು ಬದಿಗೆ ಸರಿಸಲಾಗಿದೆ. ಜಾನಪದ ಅಕಾಡೆಮಿಗೆ ಸೇರಿಸಿ ಅಲ್ಲೂ ನಮಗೆ ನ್ಯಾಯ ಸಿಗದ ಹಾಗೆ ಮಾಡಿದಿರಿ; ರವೀಂದ್ರ ಕಲಾ ಕ್ಷೇತ್ರವನ್ನು ಕೊಡಿ ಎಂದರೆ ಅದೂ ನಮಗೆ ಕೊಡಲಿಲ್ಲ.

+ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಯಕ್ಷಗಾನದ ಬಗ್ಗೆ ನಮಗೂ ಮಾನ್ಯ ಸದಸ್ಯರಿಗೆ ಇದ್ದಷ್ಟೇ ಕಳಕಳಿ ಇದೆ. ಇದು ಒಂದು ಸಂಪ್ರದಾಯವಾದ ಕಲೆ. ಕಲಾವಿದರ ಆಯ್ಕೆಗೆ ಸರ್ಕಾರದ ಮಾನದಂಡವೇನು ಎಂದು ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರ ನೀಡಲಾಗಿದೆ.

ಪ್ರತಿವರ್ಷವೂ ನವೆಂಬರ್ ಒಂದನೇ ತಾರೀಖಿಗೆ ನಾವು ರಾಜ್ಯೋತ್ಸವ ಪ್ರಶಸ್ತಿಗಳನ್ನು ಕೊಡತಕ್ಕಂಥ ಸಂಪ್ರದಾಯದಲ್ಲಿ ಸರಕಾರದವರು ಒಂದು ಶಿಫಾರಸ್ಸು ಸಮಿತಿಯನ್ನು ಮಾಡುತ್ತಾರೆ. ಸಮಿತಿಯವರು ಆಯ್ಕೆ ಮಾಡಿ ಶಿಫಾರಸ್ಸನ್ನು ಸರಕಾರಕ್ಕೆ ಕಳುಹಿಸಿಕೊಟ್ಟಾಗ ಅಂತಿಮ ತೀರ್ಮಾನವನ್ನು ಸರಕಾರವು ಮಾಡುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಕಲೆಯನ್ನು ಉದಾಸೀನ ಮಾಡಿಲ್ಲ. 1965ರಿಂದ ಇಲ್ಲಿಯವರೆಗೂ ನಾವು ಜಾನಪದ ಹಾಗೂ ಯಕ್ಷಗಾನ ಕಲಾವಿದರುಗಳಿಗೆ ಒಟ್ಟು 38 ಪ್ರಶಸ್ತಿಗಳನ್ನು ಕೊಡಲಾಗಿದೆ. ಅದರಲ್ಲಿ 14 ಪ್ರಶಸ್ತಿಗಳನ್ನು ಯಕ್ಷಗಾನ ಕಲಾವಿದರುಗಳಿಗೆ ಕೊಟ್ಟಿದ್ದೇವೆ. 1985ರಲ್ಲಿ (1) 1990ರಲ್ಲಿ (03), 1991ರಲ್ಲಿ (2), 1992ರಲ್ಲಿ (4), 1993ರಲ್ಲಿ (2), 1994ರಲ್ಲಿ (1) ಹೀಗೆ ಯಕ್ಷಗಾನ ಕಲಾವಿದರುಗಳನ್ನು ಗುರುತಿಸಿದ್ದು

ಒಟ್ಟು 14 ಯಕ್ಷಗಾನ ಕಲಾವಿದರುಗಳಿಗೆ ಪ್ರಶಸ್ತಿಯನ್ನು ಕೊಡಲಾಗಿದೆ. ಹೋದ ವರ್ಷದಲ್ಲಿ ಮಾತ್ರ ಬಹುಶಃ ಸಮಿತಿಯವರೇ ಶಿಫಾರಸ್ಸು ಮಾಡಿಲ್ಲವೆಂದು ಕಾಣುತ್ತದೆ. ಸರಕಾರದವರು ಅದನ್ನು ಹಾಗಾಗಿ ಸೇರಿಸಿಲ್ಲ. ಸರಕಾರದವರು ಶಿಫಾರಸ್ಸು ಮಾಡಿರತಕ್ಕಂಥಾದ್ದುದರಲ್ಲಿ ಕಡಿಮೆ ಮಾಡಿಲ್ಲ. ಕೆಲವು ಹೆಸರುಗಳನ್ನು ಸೇರಿಸಿದ್ದು ಅದನ್ನು ಈ ವರ್ಷದಲ್ಲಿ ಗಣನೆಗೆ ತೆಗೆದುಕೊಳ್ಳುತ್ತೇವೆ. ಸಮಿತಿಗೆ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ಹೊಸ ಸರಕಾರ ಬಂದಮೇಲೆ ಅದು ನಿಂತು ಹೋಗಿದೆ ಎಂದು ಹೇಳಿದ ಹಾಗೆ ಆಯಿತು. ಹಿಂದೆ ಕೂಡ ಇದು ನಡೆದುಕೊಂಡು ಬಂದಿತ್ತು. ನಾನು ತಿಳಿದ ಹಾಗೆ ಕಲಾವಿದರಿಗೆ ಗೌರವಧನ ಎಂದು 500 ರೂ.ಗಳನ್ನು ಕೊಡುತ್ತಾ ಇದ್ದರು. ನಾನು ಒಂದು ಪ್ರಶ್ನೆ ಕೇಳಿದಾಗ ಗೌರವಧನ ಕೊಡುವುದನ್ನು, ನಿಲ್ಲಿಸಿ ಬಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಒಬ್ಬ ಕಲಾವಿದ ಜೀವಮಾನವಿಡಿ ಯಕ್ಷಗಾನಕ್ಕಾಗಿ ಜೀವ ಸವೆಸಿದ ವ್ಯಕ್ತಿಗೆ ಬದುಕುವುದಕ್ಕೆ ಆಸರೆಯಾಗಿದ್ದನ್ನು ನೀವು ನಿಲ್ಲಿಸಿ ಬಿಡುತ್ತೀರಿ ಉಳಿದ ಕಲಾವಿದರಿಗೂ ಯಕ್ಷಗಾನ ಕಲಾವಿದರಿಗೂ ತುಂಬಾ ವ್ಯತ್ಯಾಸವಿದೆ. ಅವರು ಆರು ತಿಂಗಳು ಇಡೀ ನಿದ್ದೆ ಬಿಡಬೇಕಾಗುತ್ತದೆ. ಹೀಗಾಗಿ ಆತನು 50 ವರ್ಷಗಳಿಗಿಂತ ಹೆಚ್ಚು ಕಾಲ ಬದುಕುವುದಿಲ್ಲ. ನೀವು ಆಯ್ಕೆ ಮಾಡಬೇಕಾದರೆ 58 ವರ್ಷಗಳಾಗಬೇಕೆಂದು ಹೇಳುತ್ತಿದ್ದೀರಿ. ಒಬ್ಬ ಕಲಾವಿದ 50ರ ಮೇಲೆ ಬದುಕುವುದಿಲ್ಲ. ನಾನೇ ಸ್ವಲ್ಪ ಹೆಚ್ಚು ಬದುಕಿರುವುದು. ಆದುದರಿಂದ ತಾವುಗಳು ಸ್ವಲ್ಪ ದಯಾಳುಗಳಾಗಿ ಕೃಪೆದೋರಿಸಬೇಕು. ನಿಮ್ಮ ಸರಕಾರ ಬಂದ ಮೇಲೆ ಗೌರವಧನ ಕೊಡುವುದನ್ನು ನಿಲ್ಲಿಸಿದ್ದೀರಿ ಎಂದು ನೀವೇ ಹೇಳಿದ ಹಾಗೆ ಆಯಿತು.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಯಾವುದೇ ಸರಕಾರ ಬಂದರೂ ಕೂಡ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡುತ್ತದೆ. ಈಗ ಗೌರವಧನ ಎಂಬ ಪದವನ್ನು ಬದಲಾಯಿಸಿ ಮಾಸಾಶನ ಎಂದು ಮಾಡಿದ್ದೇವೆ. ಯಾವುದನ್ನೂ ನಿಲ್ಲಿಸುವದಕ್ಕೆ ಹೋಗಿಲ್ಲ. ತಾವು ಬೇರೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಉತ್ತರ ಕೊಡುತ್ತೇನೆ. ಗೌರವಧನ ಎಂದು ಇದ್ದುದನ್ನು ಮಾಶಾಸನ ಎಂದು ಪರಿವರ್ತನೆ ಮಾಡಿಕೊಡುವುದಕ್ಕೆ ಅವಕಾಶವಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಅನೇಕ ರೀತಿಯ ಕಲಾವಿದರುಗಳಿದ್ದಾರೆ. ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ಹೆಸರು ಪಡೆದಂತವರಿದ್ದಾರೆ. ತಮಗೆ ಗೊತ್ತಿರಬಹುದು ಕಾಶೀನಾಥ ಎಂಬ ಶಿವಮೊಗ್ಗದಿಂದ ಬಂದ ಕಲಾವಿದ ಬೆಂಗಳೂರಿನ ಕಿಡ್ಸ್‌ಕೆಂಪ್ ಹತ್ತಿರದಲ್ಲಿ ಈಶ್ವರನ ವಿಗ್ರಹವನ್ನೇನು ಮಾಡಿದ್ದಾರೆ ಅದನ್ನು ಲಕ್ಷಾಂತರ ಜನರು ಪ್ರತಿನಿತ್ಯವೂ ನೋಡುತ್ತಿದ್ದಾರೆ. ಹೊರರಾಜ್ಯಗಳಲ್ಲಿಯೂ ಅವರನ್ನು ಅಲ್ಲಿಗೆ ಆಹ್ವಾನಿಸುತ್ತಿದ್ದಾರೆ. ಇಂಥ ಕಲಾವಿದರು

ಲಕ್ಷಕ್ಕೊಬ್ಬ ಸಿಗುವುದಿಲ್ಲ. ಇಂಥ ಅಪರೂಪದ ಒಬ್ಬ ಕಲಾವಿದ ನಮ್ಮ ರಾಜ್ಯದಲ್ಲಿ ಇರಬೇಕಾದರೆ ಅವರನ್ನು ರಾಷ್ಟ್ರ ಪ್ರಶಸ್ತಿಗೆ ರೆಕಮೆಂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಅರ್ಹತೆ ಇತ್ಯಾದಿಗಳನ್ನು ನೋಡಿಕೊಟ್ಟರೆ ಸಾಕು. ಹಾಗೆ ಮಾಡಿದರೆ ದೇಶದ ಮಟ್ಟದಲ್ಲಿ ಒಂದು ಹೆಸರು ಬರಬಹುದು. ಅಂಥ ಕಲಾವಿದರಿಗೆ ಪ್ರೋತ್ಸಾಹಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ತಾವುಗಳು ಅವರ ವಿವರಗಳನ್ನು ಕಳುಹಿಸಿಕೊಡಿ. ನಾನು ಪರಿಶೀಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕುಂಬ್ಳೆ ಸುಂದರರಾಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅವರ ಧ್ವನಿ ಆಲಾಪನೆಯನ್ನು ಕೇಳಿದಾಗ ನಮಗೆ ಯಕ್ಷಗಾನದ ನೆನಪು ಬರುತ್ತಿತ್ತು. ಮುಂದಿನ ಸಾರಿ ಯಕ್ಷಗಾನ ಕಲಾವಿದರಿಗೆ ನೀವು ಪ್ರಶಸ್ತಿಯನ್ನು ಕೊಡಲಿಲ್ಲ ಅಂದರೆ ಸದನಕ್ಕೆ ತಾಳಮದ್ದಳೆಯನ್ನು ತರಬೇಕಾಗುತ್ತದೆ. ಯಕ್ಷಗಾನದ ಉಡುಪುಗಳನ್ನು ಇಲ್ಲಿ ಧರಿಸಿ ಬಂದು ಪರಿಚಯ ಮಾಡಿಕೊಡಬೇಕಾಗುತ್ತದೆ. ಯಕ್ಷಗಾನ ಅಂದರೆ ಏನು, ಅದರ ಇತಿಹಾಸ, ಪರಿಸ್ಥಿತಿ ಇತ್ಯಾದಿಗಳು ಏನು ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಹೆಚ್.ಎಸ್.ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ಧರಣಿ ಮಾಡುವುದರ ಬದಲಾಗಿ ಯಕ್ಷಗಾನ ಪ್ರದರ್ಶನ ಉತ್ತಮ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಧರಣಿ ನಮ್ಮ ಹಕ್ಕು. ಅದನ್ನು ಅವಕಾಶ ಬಂದಾಗ ಮಾಡಬೇಕಾಗುತ್ತದೆ. ಈಗ ತಾವುಗಳು ಯಕ್ಷಗಾನದ ಬಗ್ಗೆ ಹೇಳಬೇಕಾಗುತ್ತದೆ. ಮಾನ್ಯ ಸಚಿವೆಯವರು 14 ಜನ ಕಲಾವಿದರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಈ ಸರಕಾರ ಬಂದ ಮೇಲೆ ನಿಲ್ಲಿಸಿದ್ದಾರೆ ಎಂದು ಹೇಳಿದ್ದಾರೆ. ಆ 14 ಜನ ಕಲಾವಿದರು ಯಾರ್ಯಾರು ಎಂಬುದನ್ನು ಹೇಳುತ್ತೀರೊ? ಯಾವ ಕ್ಷೇತ್ರದಿಂದ ಬಂದವರು? ಯಾವ ಊರಿನವರಿಗೆ ಕೊಟ್ಟಿದ್ದಾರೆ? ಆ ಕಲಾವಿದರ ಹಿನ್ನಲೆ ಏನು ಎಂಬುದನ್ನು ದಯವಿಟ್ಟು ತಿಳಿಸುವಿರಾ?

ಅಧ್ಯಕ್ಷರು:- ಮಾನ್ಯ ಸಚಿವೆಯವರೇ ವಿವರಗಳನ್ನು ಅನಂತರ ಅವರಿಗೆ ಕಳುಹಿಸಿಕೊಡಿ.

ಶ್ರೀ ಅರಗ ಜ್ಞಾನೇಂದ್ರ:- ನಮ್ಮ ಮಲೆನಾಡು ಪ್ರದೇಶದಲ್ಲಿ ಸಮೃದ್ಧವಾಗಿರತಕ್ಕಂಥ ಕಲೆ ಎಂದರೆ ಯಕ್ಷಗಾನ. ಇಂಥ ಕಲಾವಿದರುಗಳಿಗೆ ರಾಜ್ಯಪ್ರಶಸ್ತಿ ನೀಡುವಾಗ, ಕಲೆಯ ಗಂಧ-ಗಾಳಿಯೇ ಇಲ್ಲದವರಿಗೆ ಕೊಡುತ್ತಾ ಇದ್ದಾರೆ. ಹೀಗೆ ಕಲೆಯ ಬಗ್ಗೆ ತಿಳಿಯದಿದ್ದವರ ಶಿಫಾರಸ್ಸಿನ ಮೇಲೆ ಪ್ರಶಸ್ತಿಗೆ ಆಯ್ಕೆ ಮಾಡಬಾರದು. ಕಲಾಕಾರರನ್ನು ಗುರುತಿಸುವಂಥ ವ್ಯವಸ್ಥೆಯಾಗಬೇಕು. ಮಲೆನಾಡಿನ ಭಾಗದಲ್ಲಿ ಆ ಕಲೆಗೋಸ್ಕರವಾಗಿ ಜೀವನವನ್ನೇ ಮುಡಿಪಿಟ್ಟ ಬಹಳಷ್ಟು ಕಲಾವಿದರಿದ್ದಾರೆ. ದಯಮಾಡಿ ಪ್ರಶಸ್ತಿಯನ್ನು

ಕೊಡುವಾಗ ಅಂಥ ಮಹನೀಯರಿಗೆ ಕೂಡ ನ್ಯಾಯದೊರಕುವಂತೆ ಗುರುತಿಸುವ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೇ, ಒಂದು ಸಣ್ಣ ವಾಕ್ಯವನ್ನು ಹೇಳುತ್ತೇನೆ. ಕಳೆದ ಸಲ ಯಕ್ಷಗಾನ ಅಕಾಡಮಿಗೆ ಜನರನ್ನು ಆಯ್ಕೆ ಮಾಡುವುದಕ್ಕಾಗಿ ಕೆಲವು ಹೆಸರುಗಳನ್ನು ಕೊಟ್ಟಿದ್ದೆ. ದುರ್ದೈವ ಏನಾಯಿತೆಂದರೆ ನಾನು ಕೊಟ್ಟ ಅಷ್ಟೂ ಹೆಸರುಗಳನ್ನು ಕೈಬಿಟ್ಟು ನನ್ನನ್ನು ಅಕಾಡಮಿಯ ಸದಸ್ಯರನ್ನಾಗಿ ಮಾಡಿದರು. ನಾನು ಇಲ್ಲಿ ಭಾಗವಹಿಸುವುದೋ? ಅಲ್ಲಿ ಭಾಗವಹಿಸುವುದೋ? ಇದು ಸರಿಯಾಗಿಲ್ಲ. ಸರಿಯಾದ ಅರ್ಹ ವ್ಯಕ್ತಿಗಳಿದ್ದಾರೆ. ನಿಮ್ಮ ಆಯ್ಕೆ ಮಾಡುವಂಥ ಸಮಿತಿಯಲ್ಲಿ ಒಬ್ಬಿಬ್ಬರು ಕಲಾವಿದರುಗಳನ್ನು, ಅನುಭವಿಗಳನ್ನು ಸೇರಿಸಿಕೊಳ್ಳುವ ಕೆಲಸ ಮಾಡಿ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್:- ಮಾನ್ಯ ಸದಸ್ಯರುಗಳ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ವಿಷಯ:- ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆಯ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 170 (1132)

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆ ತುಂಬ ಹದಗೆಟ್ಟಿರುವುದು ಮತ್ತು ವಾಹನ ಸಂಚಾರಕ್ಕೆ ತೀವ್ರ ಅನಾನುಕೂಲವಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸದರಿ ರಸ್ತೆಯನ್ನು ಎಷ್ಟು ದಿನಗಳಲ್ಲಿ ದುರಸ್ತಿ ಮಾಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹುಣಸೂರು ಮತ್ತು ವಿರಾಜಪೇಟೆ ಮಧ್ಯೆ ಇರುವ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು, ವಾಹನ ಸಂಚಾರಕ್ಕೆ ಕೆಲವು ಕಡೆ ಅನಾನುಕೂಲವಾಗಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸದರಿ ರಸ್ತೆಯು ಒಟ್ಟು 55.64 ಕಿಮೀ. ಉದ್ದವಿದ್ದು, ಈ ರಸ್ತೆಯಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚಿ, ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ. 1996-97ನೇ ಸಾಲಿನಲ್ಲಿ ಈ ರಸ್ತೆಯ 8.0ನೇ ಕಿ.ಮೀ.ನಲ್ಲಿ ಒಂದು ಸೇತುವೆಯ ನಿರ್ಮಾಣವನ್ನು ಸೇರಿಸಿ, ಆಯ್ದ ಭಾಗಗಳ ದುರಸ್ತಿ ಹಾಗೂ ಮರು ಡಾಂಬರೀಕರಣ ಕಾಮಗಾರಿಗಳನ್ನು ಒಟ್ಟು 32.00 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ, ಒಟ್ಟು 6 ಕಾಮಗಾರಿಗಳು ಸೇರಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 2 ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನಿಗಧಿಪಡಿಸಿದ್ದು,